ಶ್ರೀ ಧರ್ಮಸಿಂಗ್ : ಮಾನ್ಯ ಶ್ರೀರಾಮರೆಡ್ಡಿಯವರೇ, ಈ ಎಲ್ಲಾ ವಿಷಯಗಳಿಗೂ ನಮ್ಮ ಅಧಿಕಾರಿಗಳು ಮತ್ತು ನಮ್ಮ ವಕೀಲರುಗಳು ಪ್ರತಿಪಾದನೆಯನ್ನು ಮಾಡುತ್ತಿದ್ದಾರೆ. ಅದಕ್ಕೆ ನಾನು ಸದನದಲ್ಲಿ ಈ ವಿಷಯ ಕೋರ್ಟಿನಲ್ಲಿ ಇರುವುದರಿಂದ, ಇಲ್ಲಿ ಹೆಚ್ಚಿನ ವಿವರವಾದ ಚರ್ಚೆಗೆ ಅಗತ್ಯವಿಲ್ಲವೆಂದು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಈ 20,000 ನಿವೇಶನಗಳನ್ನು ಕೊಡುವಂಥಾದ್ದು ಸತ್ಯವೇ, ಅಥವಾ 20,000 ಸಾವಿರ ನಿವೇಶನಗಳನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಬರೀ 10,000 ನಿವೇಶನಗಳನ್ನು ಮಾತ್ರ ಕೊಡುವುದಕ್ಕೆ ರಿಸ್ಟ್ರಿಕ್ಟ್ ಮಾಡಿದ್ದೆವೆಂದು ಆದರೂ ಹೇಳಲಿ.

ಶ್ರೀ ಧರ್ಮಸಿಂಗ್ : ನಾವು ನಿವೇಶನಗಳನ್ನು ಕೊಡಬೇಕೆಂದು, ನಾವು ಅರ್ಜಿಗಳನ್ನು ಆಹ್ವಾನ ಮಾಡಿ, ಈಗಾಗಲೇ ದುಡ್ಡನ್ನು ಕಲೆಕ್ಟ್ ಮಾಡಿದ್ದೇವೆ. ಮೊದಲು 10,000 ನಿವೇಶನವನ್ನು ಕೊಡುವಂತಹ ಕಾರ್ಯಕ್ರಮವೂ ಇತ್ತು. ಆದರೆ ಹೈಕೋರ್ಟಿನ ತಡೆಯಾಜ್ಞೆ ಬಂದಮೇಲೆ ಇದನ್ನು ನಿಲ್ಲಿಸಿದ್ದೇವೆ.

ಉಡುಪಿ ಜಿಲ್ಲೆ ನಬಾರ್ಡ್ ಯೋಜನೆಯಡಿಯಲ್ಲಿ ವೆಂಟೆಡ್ ಡ್ಯಾಂಗಳಿಗೆ ಹಣ ಬಿಡುಗಡೆ

24 (494) : ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004–05ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ನಬಾರ್ಡ್ ಯೋಜಜನೆಯಡಿ ಎಷ್ಟು ವೆಂಟೆಡ್ ಡ್ಯಾಂಗಳು ಮಂಜೂರಾಗಿರುತ್ತವೆ.

ಆ) ಅದರಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಯಾವ ಯಾವ ಸ್ಥಳಗಳಲ್ಲಿ ವೆಂಟೆಡ್ ಡ್ಯಾಂಗಳನ್ನು ಮಂಜೂರು ಮಾಡಲಾಗಿರುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 09 ವೆಂಟೆಡ್ ಡ್ಯಾಂಗಳು ಮಂಜೂರಾಗಿರುತ್ತವೆ.

ಆ) ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಸ್ಥಳಗಳಲ್ಲಿ ವೆಂಟೆಡ್ ಡ್ಯಾಂಗಳನ್ನು ಮಂಜೂರು ಮಾಡಲಾಗಿರುತ್ತದೆ.

1. ಕೊಡ್ಲಾಡಿ ಎಂಬಲ್ಲಿ ಕೊಡ್ಲಿ ಹೊಳೆಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣ.
2. ಸೇನಾಪುರ ಗ್ರಾಮದ ಬಂಡ್ಯಾಡಿ ಎಂಬಲ್ಲಿ ಕೊಲ್ಲೂರು ಹೊಳೆಗೆ ಅಡ್ಡಲಾಗಿ ಉಪ್ಪುನೀರು ತಡೆ ಅಣೆಕಟ್ಟು ನಿರ್ಮಾಣ.

ಶ್ರೀ ಕೆ. ಗೋಪಾಲ ಪೂಜಾರಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಎರಡು ವೆಂಟೆಡ್ ಡ್ಯಾಂಗಳು ನಬಾರ್ಡ್ ವತಿಯಿಂದ ಮಂಜೂರಾಗಿವೆ. ಹಿಂದೆ, ಬಂಡ್ಸೆ ಎಂಬಲ್ಲಿ ಉಪ್ಪುನೀರು ತಡೆ ಅಣೆಕಟ್ಟು ನಿರ್ಮಾಣಕ್ಕೆ ಅನುಮತಿಯಾಗಿ ಈಗ ಅದು ಟೆಂಡರ್ ಆಗಿದೆ. ಅದು ಯಾವಾಗ ಕೆಲಸ ಪ್ರಾರಂಭವಾಗುತ್ತದೆ. ಅದಲ್ಲದೆ, ಈಗ ಮಂಜೂರಾಗಿರುವ ಇವೆರಡು ವೆಂಟೆಡ್ ಡ್ಯಾಂಗಳಿಗೆ ಸರ್ಕಾರದ ಅನುದಾನವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಯಾವಾಗ ಇವುಗಳ ಕೆಲಸ ಪ್ರಾರಂಭವಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಉಡುಪಿ ಜಿಲ್ಲೆಯಲ್ಲಿ ಈಗಾಗಲೇ 9 ವೆಂಟೆಡ್ ಡ್ಯಾಂಗಳಿಗೆ ಮಂಜೂರಾತಿ ಮಾಡಲಾಗಿದೆ. ಅವುಗಳಲ್ಲಿ, ಈ ಶಾಸಕರ ಮತಕ್ಷೇತ್ರದಲ್ಲಿ 2 ವೆಂಟೆಡ್ ಡ್ಯಾಂಗಳನ್ನು ಮಂಜೂರು ಮಾಡಿದ್ದೇವೆ. ಇದರಲ್ಲಿ ಸೇನಾಪುರ ಗ್ರಾಮದ ಯೋಜನೆಗೆ ಮೂರನೇ ಒಂದರಷ್ಟು ಅನುದಾನ ಪ್ರಾವಿಷನ್ ಇಲ್ಲ. ಏಕೆಂದರೆ, ಇದು 470 ಲಕ್ಷ ರೂಪಾಯಿಗಳ ವೆಂಟೆಡ್ ಡ್ಯಾಂ ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಮೂರನೇ ಒಂದರಷ್ಟು ಅನುದಾನ ಪ್ರಾವಿಷನ್ ಮಾಡಿ ಇಡಬೇಕು. ಈಗ ಅದು ಇಲ್ಲ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಮೂರನೇ ಒಂದರಷ್ಟು ಅನುದಾನಕ್ಕೆ ಪ್ರಾವಿಷನ್ ಮಾಡಿ, ಇವೆರಡೂ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಯಾವಾಗ ಎನ್ನುವ ಬಗ್ಗೆ ನಿಖರವಾದ ಡೇಟ್ ಹೇಳಲು ಆಗುವುದಿಲ್ಲ. ಟೆಂಡರ್ ಕಾಲ್ ಫಾರ್ ಮಾಡಿ ಕೂಡಲೇ ತೆಗೆದುಕೊಳ್ಳುತ್ತೇವೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದವರು IIನೇ ವಿಧಾನಸಭೆಯಲ್ಲಿ ಹೇಳಿದ್ದರು, ನಮ್ಮ ಉಡುಪಿ ಜಿಲ್ಲೆಯ ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಪಶ್ಚಿಮ ವಾಹಿನಿ ನದಿಗಳಿಗೆ ಕಿಂಡಿ ಅಣೆಕಟ್ಟುಗಳನ್ನು ಕಟ್ಟಿ ಅಂತರ್ಜಲ ಹೆಚ್ಚು ಮಾಡುವುದು, ಕುಡಿಯುವ ನೀರು ಇವೆಲ್ಲದಕ್ಕೂ ಅವಕಾಶ ಮಾಡಿಕೊಟ್ಟು ಪಶ್ಚಿಮ ಘಟ್ಟ ತಪ್ಪಲಿನ ನಾಲ್ಕು ಜಿಲ್ಲೆಗಳನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದ್ದರು. ಆ ಕಾರ್ಯಕ್ರಮ ಏನಾಯಿತು ಎಂದು ನಾನು ಕೇಳುತ್ತಿದ್ದೇನೆ. ಅದೂ ಅಲ್ಲದೆ, ನಾನು ಹಿಂದಿನ ವಿಧಾನಸಭೆಯಲ್ಲೂ ಹೇಳಿದ್ದೆ, ಸೇತುವೆಗಳನ್ನು ಕಟ್ಟುವುದು ನದಿಗಳಿಗೆ. ಆ ರೀತಿ ಸೇತುವೆಗಳನ್ನು ಕಟ್ಟುವಾಗ, ಕಿಂಡಿ ಅಣೆಕಟ್ಟುಗಳಿಗೆ ಅವಕಾಶವಿದ್ದರೆ ವೆಚ್ಚಗಳೂ ಸಹ ಕಡಿಮೆಯಾಗುತ್ತದೆ ಮತ್ತು ಇದರಿಂದ ಜನರಿಗೂ ಸಹ ಉಪಯೋಗವಾಗುತ್ತದೆ. ಆದ್ದರಿಂದ, ಎರಡೂ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಿದರೆ ಜನರ ಸಮಸ್ಯೆಗಳನ್ನು ಪರಿಹಾರ ಮಾಡಬಹುದು ಎಂದು ನಾನು ಹಿಂದಿನ ವಿಧಾನಸಭೆಯಲ್ಲಿ ಹೇಳಿದ್ದೆ. ಅದರ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಅದಕ್ಕೆ ಏನಾದರೂ ಪರಿಹಾರ ಕಂಡುಕೊಂಡರೆ ಜನರಿಗೂ ಉಪಯೋಗವಾಗುತ್ತದೆ, ವೆಚ್ಚ ಸಹ ಕಡಿಮೆಯಾಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಅದಕ್ಕೆ ಉತ್ತರ ಒದಗಿಸಿಕೊಡುತ್ತೇವೆ. ಈ ಪ್ರಶ್ನೆಯನ್ನು ಕೇವಲ ಬೈಂದೂರಿಗೆ ಸಂಬಂಧಪಟ್ಟಂತೆ ಅವರು ಕೇಳಿದ್ದರು, ಅದರ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ.

ಅಧ್ಯಕ್ಷರು : ಎಸ್.ಎಸ್. ಪಾಟೀಲರೇ, ನಿಮ್ಮ ಪ್ರಶ್ನೆಗೆ ಒಂದು ವಾರದ ಕಾಲಾವಕಾಶ ತೆಗೆದುಕೊಂಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮುಂದಿನ ಸೋಮವಾರವಾದರೂ ಇದನ್ನು ತೆಗೆದುಕೊಳ್ಳುವಿರಾ?

ಅಧ್ಯಕ್ಷರು : ಈ ಅಧಿವೇಶನದಲ್ಲೇ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ತಾವು ನೀಡಿರುವ ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ, ಈ ಪ್ರಶ್ನೆಗೆ ಉತ್ತರವನ್ನು ಸರ್ಕಾರದಿಂದ ಪಡೆದ ನಂತರ ತಮಗೆ ಕಳುಹಿಸಿ ಕೊಡಲಾಗುವುದು ಎಂದು ಹೇಳಿದ್ದೀರಿ. ದಯವಿಟ್ಟು, ಉತ್ತರವನ್ನು ಕಳುಹಿಸಿ ಕೊಡುವುದು ಬೇಡ, ಮುಂದಿನ ಸೋಮವಾರಕ್ಕೆ ಈ ಪ್ರಶ್ನೆಯನ್ನು ಹಾಕಿಬಿಡಿ.

ಅಧ್ಯಕ್ಷರು : ಇಲ್ಲ, ಸರ್ಕಾರದವರು ಒಂದು ವಾರದ ಕಾಲಾವಕಾಶ ತೆಗೆದುಕೊಂಡಿದ್ದಾರೆ. ಈ ಅಧಿವೇಶನದಲ್ಲೇ ಉತ್ತರ ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮುಖ್ಯಮಂತ್ರಿಗಳು ಉತ್ತರ ನೀಡಲು ತಯಾರಿದ್ದಾರೆ. ಆದರೆ ಅಧಿಕಾರಿಗಳು ಏಕೆ ಇದಕ್ಕೆ ಟೈಂ ತೆಗೆದುಕೊಂಡರೋ ನನಗೆ ಗೊತ್ತಾಗಲಿಲ್ಲ. ಇದು ಬಹಳ ಮಹತ್ವವಾದುದು. ಇದನ್ನು ಮುಂದಿನ ಸೋಮವಾರದ ದಿವಸ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಆಯಿತು. ಈಗ ಮುಂದಿನ ಪ್ರಶ್ನೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಜಮೀನುಗಳಿಗೆ ಪರಿಹಾರ

26 (463) : ಶ್ರೀ ಜೆ. ನರಸಿಂಹ ಸ್ವಾಮಿ (ದೊಡ್ಡಬಳ್ಳಾಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಜಮೀನುಗಳನ್ನು ನಿವೇಶನಕ್ಕಾಗಿ ಸ್ವಾಧೀನಪಡಿಸಿಕೊಂಡಾಗ ಅವರುಗಳಿಗೆ ನೀಡುವ ಪರಿಹಾರದ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ 1894, ಕಲಂ 11ರನ್ವಯ ಭೂಪರಿಹಾರವನ್ನು ನಿಗದಿಪಡಿಸಿ ಪಾವತಿಸಲಾಗುತ್ತಿದೆ. ಈ ರೀತಿ ನಿಗದಿಪಡಿಸುವ ಭೂ ಪರಿಹಾರದಲ್ಲಿ ಪ್ರಾರಂಭಿಕ ಅಧಿಸೂಚನೆಯ ಸಮಯದಲ್ಲಿನ ಹಿಂದಿನ 3 ವರ್ಷಗಳ ಮಾರುಕಟ್ಟೆಯ ಸರಾಸರಿ ದರವನ್ನು ಪರಿಗಣಿಸಿ ನಿಗದಿಪಡಿಸಿದ ಭೂಮಿಯ ಬೆಲೆ, 30% ಸೊಲೇಷಿಯಂ ಮತ್ತು ಪ್ರಾರಂಭಿಕ ಅಧಿಸೂಚನೆಯ ದಿನಾಂಕದಿಂದ ಐತೀರ್ಪು ರಚಿಸುವವರೆಗೆ ಅಥವಾ ಭೂಸ್ವಾಧೀನ ಪಡೆಯುವ ಅವಧಿಯವರೆಗೆ 12% ಹೆಚ್ಚುವರಿ ಮಾರುಕಟ್ಟೆಯ ಬೆಲೆಯು ಒಳಗೊಂಡಿರುತ್ತದೆ ಹಾಗೂ ಪ್ರೋತ್ಸಾಹದಾಯಕ ಯೋಜನೆಯಡಿ 40–60ರ ಒಂದು ನಿವೇಶನವನ್ನೂ ಗರಿಷ್ಠ 10 ನಿವೇಶನಗಳಿಗೆ ಸೀಮಿತಗೊಳಿಸಿ, ಶೇಕಡ 25ರ ಹಂಚಿಕೆ ದರವನ್ನು ಪಾವತಿಸಿಕೊಂಡು ನೀಡಲಾಗುತ್ತಿದೆ.

ಶ್ರೀ ಜೆ. ನರಸಿಂಹಸ್ವಾಮಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಕೊಡುವ ಪರಿಹಾರ ಹಣವೆಷ್ಟು ಎಂದು ಕೇಳಿದ್ದೇವೆ. ಅದಕ್ಕೆ ಉತ್ತರವಾಗಿ, ಮೂರು ವರ್ಷಗಳ ಮಾರುಕಟ್ಟೆಯ ಸರಾಸರಿ ದರದ ಮೇಲೆ ಶೇಕಡ 30ರಷ್ಟು ಹೆಚ್ಚಿಗೆ ಫಿಕ್ಸ್ ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಅಧಿಕಾರಿಗಳು ಬಹಳ ಅವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡುತ್ತಿದ್ದಾರೆಂದು ನಾವು ಭಾವಿಸಿದ್ದೇವೆ. ಇವತ್ತು ಅಲ್ಲಿ ಒಂದು ರೂಪಾಯಿ ರೇಟ್ ಇದ್ದರೆ, ಭೂಮಿ ಕಳೆದುಕೊಂಡಂಥ ರೈತರಿಗೆ ಬಿ ಡಿ ಎ ನವರು ಇಪ್ಪತ್ತು ಪೈಸೆಯಷ್ಟು ರೇಟನ್ನು ಕೊಡುತ್ತಿದ್ದಾರೆ. ಜಮೀನು ಕಳೆದುಕೊಂಡಂಥ ಸಂಪಿಗೆಹಳ್ಳಿಯ ರೈತ ಪಕ್ಕದ ದೇವನಹಳ್ಳಿಗೆ ಹೋಗಬೇಕಾಗುತ್ತದೆ. ದೇವನಹಳ್ಳಿಯಲ್ಲಿ ಇವತ್ತು ಒಂದು ಎಕರೆಗೆ ಒಂದು ಕೋಟಿ ರೂಪಾಯಿ ಬೆಲೆಯಾಗಿದೆ. ದೊಡ್ಡಬಳ್ಳಾಪುರಕ್ಕೆ ಹೋದರೆ, ಅಲ್ಲಿ ಒಂದು ಎಕರೆಗೆ ಇಪ್ಪತ್ತು ಲಕ್ಷ ರೂಪಾಯಿ ಆಗಿದೆ. ನೂರಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದಂಥ ರೈತರು ಇವತ್ತು ಜಮೀನನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ, ಈಗ ಕೊಡುತ್ತಿರುವ ದರವನ್ನು ಪುನರ್